ಪಾಠ–5 ಏಪ್ರಿಲ್ 27–ಮೇ 3

# ಕುಟುಂಬಗಳಿಗೆ ಬುದ್ಧಿ ಮಾತುಗಳು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಜ್ಞಾನೋಕ್ತಿಗಳು 5:3–14; ಮತ್ತಾಯ 19:5, 1 ಕೊರಿಂಥದವರಿಗೆ 7:3,4; ಜ್ಞಾನೋಕ್ತಿಗಳು 13:22; 14:26; 23:13,14; 17:22; 31:10–31.

ಸ್ಮರಣವಾಕ್ಯ : "ಸ್ವಬುದ್ಧಿಯನ್ನು ಆಧಾರ ಮಾಡಿಕೊಳ್ಳದೆ ಪೂರ್ಣ ಮನಸ್ಸಿನಿಂದ ಯೆಹೋವನಲ್ಲಿ ಭರವಸವಿಡು. ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು ಆತನೇ ನಿನ್ನ ಮಾರ್ಗಗಳನ್ನು ಸರಾಗ ಮಾಡುವನು" (ಜ್ಞಾನೋಕ್ತಿಗಳು 3:5,6).

ಈಗ ನಾವು ಜೀವನದಲ್ಲಿ ಯಾವುದೇ ಹಂತದಲ್ಲಿದ್ದರೂ, ನಾವೆಲ್ಲರೂ ಸಹ ತಂದೆ ಮತ್ತು ತಾಯಿಯರೊಂದಿಗೆ ಪ್ರಾರಂಭಿಸಿದ್ದೇವೆ. ಯಾವುದೇ ಬಗೆಯ ಸಂಬಂಧದ ಹೊರತಾಗಿಯೂ ಯಾವುದಾದರೂ ಇದ್ದಲ್ಲಿ ನಮ್ಮ ಜನನದ ನಂತರ ಅವರೊಂದಿಗೆ ಹೊಂದಿದ್ದೇವೆ. ಕೆಲವು ಜನ ಒಡಹುಟ್ಟಿದವರು ಅಥವಾ ಇತರ ಸಂಬಂಧಿಕರನ್ನು ಹೊಂದಿದವರನ್ನು ಹೊರತುಪಡಿಸಿ ಅವರಿಗೆ ಸ್ವಂತ ಕುಟುಂಬವನ್ನು ಎಂದಿಗೂ ಹೊಂದಿರುವುದಿಲ್ಲ – ಅವರು ಬೆಳೆದು ಬಂದದ್ದನ್ನು ಹೊರತು ಪಡಿಸಿ.

ನಮ್ಮ ಪರಿಸ್ಥಿತಿ ಏನೇ ಆದರೂ, ನಮ್ಮ ಜೀವನದ ಹಂತ ಏನೇ ಆದರೂ, ಜ್ಞಾನೋಕ್ತಿ ಪುಸ್ತಕವು ಪಾಠಪ್ರವಚನಗಳ, ಕವಿತೆಗಳ, ಪ್ರಶ್ನೆಗಳ ಮತ್ತು ಬುದ್ಧಿವಂತ ಹೇಳಿಕೆಗಳ ಸಂಯೋಜನೆಯನ್ನು ಒಳಗೊಂಡಿದೆ. ಕುಟುಂಬದ ಸಂಬಂಧಗಳನ್ನು ನೇರವಾಗಿ ಉದ್ದೇಶಿಸಲಾಗಿದೆ ಮತ್ತು ಇತರ ಜ್ಞಾನದ ಮಾತುಗಳು ಮನೆಗೂ

ಅನ್ವಯಿಸಬಹುದು. ಜ್ಞಾನೋಕ್ತಿಯು ವಾಸ್ತವವಾಗಿ ಒಂದು ಕುಟುಂಬದ ದಾಖಲೆಯಂತಿದೆ. ಧಾರ್ಮಿಕ ಜೀವನದ ಕೀಲಿಕೈಯನ್ನು ತಂದೆ–ತಾಯಿಗಳಿಂದ ಮಗುವಿಗೆ ಹಸ್ತಾಂತರಿಸಲಾಗುತ್ತದೆ. ಪೋಷಕರು ಕಾಲೇಜಿಗೆ ಹೋಗುವ ಮಗ ಅಥವಾ ಮಗಳಿಗೆ, ಪ್ರತ್ಯೇಕ ವಾಸಸ್ಥಳ ಸ್ಥಾಪಿಸಿಕೊಳ್ಳುವವರಿಗೆ ಅಥವಾ ಮನೆಯಿಂದ ಹೊರಗೆ ಉದ್ಯೋಗ ತೆಗೆದುಕೊಳ್ಳುವವರಿಗೆ ಬರೆಯುವ ಸಲಹೆ ಪತ್ರದಂತೆಯೇ ಜ್ಞಾನೋಕ್ತಿಗಳು ತಂದೆಯಿಂದ ಮಗನಿಗೆ ಸಂಬೋಧಿಸಲಾಗಿದೆ. "ಮಗನೇ ನಿನ್ನ ತಂದೆಯ ಉಪದೇಶವನ್ನು ಕೇಳು, ನಿನ್ನ ತಾಯಿಯ ಬೋಧನೆಯನ್ನು ತೊರೆಯಬೇಡ" (ಜ್ಞಾನೋಕ್ತಿಗಳು 1:8). ಪೋಷಕರು ಮುಂದಿನ ಪೀಳಿಗೆಯೊಂದಿಗೆ ತಮ್ಮ ಸಂಕಲ್ಪಗಳನ್ನು ಹಂಚಿಕೊಳ್ಳಲು ಧರ್ಮೋಪದೇಶಕಾಂಡ ಮಾರ್ಗ ನಿರ್ದೇಶನ ಮಾಡಿತು. ಇದನ್ನು ತಾನೇ ಜ್ಞಾನೋಕ್ತಿಗಳು ಮಾಡುವುದು. ತಂದೆಯ ಆಜ್ಞಾಪತ್ರಗಳಲ್ಲಿ ನಾವು ಕಲಿಯುವುದಕ್ಕೆ ಕರೆಯುವ ಪರಲೋಕ ತಂದೆಯ ಧ್ವನಿಯನ್ನು ಕೇಳಿಸಿಕೊಳ್ಳುತ್ತೇವೆ.

*** ಮೇ 4ರ ಸಬ್ಬತ್ತಿನ ಸಿದ್ಧತೆಗೆ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.**

**ಭಾನುವಾರ** **ಏಪ್ರಿಲ್ 28**

## ಸರಿಯಾದ ಮಹಿಳೆಯನ್ನು ಪ್ರೀತಿಸು

**ಜ್ಞಾನೋಕ್ತಿಗಳು 5:3–14ರಲ್ಲಿ ಚಿತ್ರಿಸಿದಂತೆ ಮದುವೆ ಮೊದಲೇ ಲೈಂಗಿಕ ಹಾದರ ಅಥವಾ ವಿವಾಹೇತರ ವ್ಯಕ್ತಿಗಳ ನಡುವಿನ ಲೈಂಗಿಕ ಹಗರಣದೊಂದಿಗೆ ಒಳಗೊಂಡಿರುವ ಸಮಸ್ಯೆಗಳನ್ನು ಮತ್ತು ಪರಿಣಾಮಗಳನ್ನು ಪಟ್ಟಿ ಮಾಡಿರಿ.**

ಧಾರ್ಮಿಕ ವ್ಯಕ್ತಿಯು ಆತನ ಮತ್ತು ಆಕೆಯ ಆಳವಾದ ಪ್ರೀತಿಯನ್ನು ಮತ್ತು ಮದುವೆಗೋಸ್ಕರ ಲೈಂಗಿಕ ಆತ್ಮೀಯತೆಯನ್ನು ಮೀಸಲಾಗಿಡುತ್ತಾರೆ. (ಮದುವೆಯಾಗದೆ ಇದ್ದರೆ) ಮತ್ತು ಕಾಪಾಡಿಕೊಳ್ಳುತ್ತಾರೆ (ಮದುವೆಯಾದರೆ) ಜ್ಞಾನೋಕ್ತಿಯಲ್ಲಿ ವಿಶೇಷವಾಗಿ ಪುರುಷನನ್ನು ಉಲ್ಲೇಖಿಸಲಾಗಿದೆ. ಆದರೆ ಈ ಕಲ್ಪನೆಯು ಮಹಿಳೆಯರಿಗೂ ಸಂಬಂಧಿಸುತ್ತದೆ ಎಂದು ಪರಮಗೀತ ಪುಸ್ತಕದಲ್ಲಿ ವ್ಯಕ್ತಪಡಿಸಲಾಗಿದೆ. (ಪರಮಗೀತ 4:12–15 ಹೋಲಿಸಿರಿ). ಶಕ್ತಿಯುತ ಕಾನೂನು ಬಾಹಿರ ಪ್ರೀತಿಯ ಆಕರ್ಷಣೆಯನ್ನು ಪಾಪದ ಭಯಂಕರ ಪರಿಣಾಮಗಳಿಗೆ

ವಿರುದ್ಧವಾಗಿ ತೂಕ ಮಾಡಲೇಬೇಕು. ಅನಿಶ್ಚಿತ ಲೈಂಗಿಕ ಸಂಬಂಧಗಳು ವಚನ ಬದ್ಧತೆಯ ಅಭಾವ ಇರುವುದರಿಂದ ನಿಜವಾದ ಪ್ರೀತಿಯು ತೀರಾ ದೂರ ಬೀಳುತ್ತದೆ. ವಸ್ತು, ದೈಹಿಕ ಮತ್ತು ಭಾವನಾತ್ಮಕ ಸಂಪನ್ಮೂಲಗಳನ್ನು ಚದರಿಸಲಾಗುತ್ತದೆ. ಅತ್ಯಂತ ಮುಖ್ಯವಾದದ್ದು ಜೀವನದಲ್ಲಿ ಮಾಡಿದ ಆಯ್ಕೆಗಳಿಗಾಗಿ ಒಬ್ಬರು ದೇವರಿಗೆ ಉತ್ತರಿಸಲೇಬೇಕು.

ಲೈಂಗಿಕ ಪ್ರೀತಿಯು ಮಾನವರಿಗೆ ದೇವರು ಕೊಟ್ಟ ಅತ್ಯಮೂಲ್ಯ ವರಗಳಲ್ಲಿ ಒಂದು. ಮದುವೆಯ ಸೌಕರ್ಯರ್ಕ್ಕಾಗಿ ಮಾತ್ರ (ಮತ್ತಾಯ 19:5; 1 ಕೊರಿಂಥದವರಿಗೆ 7:3,4; ಇಬ್ರಿಯರಿಗೆ 13:4) ಜ್ಞಾನೋಕ್ತಿಗಳಲ್ಲಿ ಪೋಷಣೆ ನೀಡುವುದರ ಭಾವನೆ. ಸಮೃದ್ಧವಾದ ನೀರಿನ ನಯವಾದ ಚಿತ್ರಣವನ್ನು ವಿವಾಹಿತ ದಂಪತಿಗಳು ಪ್ರೀತಿಯಲ್ಲಿ ಒಟ್ಟಾಗಿ ಪಡೆಯಬೇಕಾದ ಸಂತೋಷ ಮತ್ತು ತೃಪ್ತಿಯ ಒಂದು ಸೂಕ್ಷ್ಮ ಚಿಹ್ನೆಯಾಗಿ ಬಳಸಲಾಗುತ್ತದೆ. ಇದು ಪ್ರಯೋಜನವಿಲ್ಲದ್ದರೊಂದಿಗೆ ವ್ಯತಿರಿಕ್ತವಾಗಿದೆ ಅದು ಅಪನಂಬಿಗಸ್ತಿಕೆಯಿಂದಾದ ಫಲಿತಾಂಶಗಳಾಗಿದೆ. "ನಿನ್ನ ಯೌವನದ ಪತ್ನಿ" (ಜ್ಞಾನೋಕ್ತಿ 5:8) ಎಂಬ ಭಾವವು ಇಬ್ಬರಿಗೂ ವಯಸ್ಸಾದರೂ ಸಹ, ಅವರ ವಚನ ಬದ್ಧತೆಯು ಮುಂದುವರಿಯುತ್ತದೆಂದು ಸೂಚಿಸುತ್ತದೆ. ಪತಿ ಇನ್ನೂ ಪತ್ನಿಯ ಸೌಂದರ್ಯದಿಂದ ಪರವಶನಾಗಿದ್ದಾನೆ ("ಅಮಲೇರಿಸು" (ಜ್ಞಾನೋಕ್ತಿಗಳು 5:19)).

ಮಾನವನ ಬಿದ್ದುಹೋದ ಪರಿಸ್ಥಿತಿಯಲ್ಲಿ ಲೈಂಗಿಕತೆಯ ಸಹಜ ಪ್ರವೃತ್ತಿಯು ವ್ಯಕ್ತಿಗಳನ್ನು ಮರಳುಗೊಳಿಸಿ ಲೈಂಗಿಕತೆಗಾಗಿ ದೈವೀಕ ವಿನ್ಯಾಸದಿಂದ ದೂರವಿರಿಸಬಹುದು. ಹೇಗಾದರೂ, ದೇವರು ಮಾನವ ಕುಲಕ್ಕೆ ವಿವೇಚನಾಶಕ್ತಿ ಮತ್ತು ಆರಿಸಿಕೊಳ್ಳುವ ಶಕ್ತಿಕೊಟ್ಟಿದ್ದಾನೆ. ಈ ಶೋಧನೆಗಳನ್ನು ನಿರಂತರವಾಗಿ ಹತ್ತಿಕ್ಕದಿದ್ದರೆ ತಡೆಯಲಾಗದಿರಬಹುದು. ಮದುವೆಯಲ್ಲಿ ದೈವೀಕ ವಿನ್ಯಾಸದ ಲೈಂಗಿಕತೆಗಾಗಿ ದೃಢವಾದ ವಚನ ಬದ್ಧತೆಯು ಲೈಂಗಿಕ ಅಕ್ರಮ ಸಂಬಂಧಗಳ ಬೆಳವಣಿಗೆಯನ್ನು ತಡೆಯಬಹುದು. ವಿವಾಹದಲ್ಲಿ ದೇವರ ವಿನ್ಯಾಸದ ಲೈಂಗಿಕತೆಗಾಗಿ ಜೀವನ ಪೂರ್ತಿ ನಂಬಿಗಸ್ತಿಕೆಯಿಂದಿರುವ ಆಯ್ಕೆಯು ವಿವೇಕಯುತ ಮಾತ್ರವಲ್ಲದೆ ತನ್ನದೇ ಆದ ಔಪಚಾರಿಕ ಪ್ರತಿಫಲವನ್ನು ಹೊಂದಿದೆ.

**ವಿವಾಹವನ್ನು ನಾಶಮಾಡುವ ಲೈಂಗಿಕ ಶೋಧನೆಗಳೊಂದಿಗೆ ಯಾರಾದರೂ ಹೋರಾಟ ಮಾಡುತ್ತಿದ್ದರೆ ಆ ವ್ಯಕ್ತಿಗೆ ನೀವು ಯಾವ ಸಲಹೆಯನ್ನು ನೀಡುತ್ತೀರಿ?**

**ಸೋಮವಾರ** **ಏಪ್ರಿಲ್ 29**

## ತಂದೆಗೆ ಕರೆ

ಮಕ್ಕಳಿಗೆ ದೀರ್ಘಾವಧಿಯ ಪರಿಹಾರಗಳನ್ನು ಹೊಂದಿರುವ ಜ್ಞಾನೋಕ್ತಿಗಳಲ್ಲಿ ವಿವರಿಸಿದ ತಂದೆಯ ಗುಣಲಕ್ಷಣಗಳನ್ನು ಗಮನಿಸಿ :

ಜ್ಞಾನೋಕ್ತಿಗಳು 13:22; 27:23,24 ..........................................

ಜ್ಞಾನೋಕ್ತಿಗಳು 14:26 ..........................................................

ಜ್ಞಾನೋಕ್ತಿಗಳು 15:1,18; 16:32 ..............................................

ಜ್ಞಾನೋಕ್ತಿಗಳು 15:27 ..........................................................

ಜ್ಞಾನೋಕ್ತಿಗಳು 29:17 ..........................................................

ತಂದೆಯ ಗುಣಲಕ್ಷಣಗಳು ಅವರ ಮಕ್ಕಳ ಮೇಲೆ ನೇರ ಪ್ರಭಾವವನ್ನು ಬೀರುತ್ತದೆ ಮತ್ತು ಅವರಿಗೆ ತಮ್ಮ ಪರಂಪರೆಯಾಗಿ ಮುಂದುವರೆಯುತ್ತದೆ. ಮಕ್ಕಳು ಭಕ್ತಿಯುಳ್ಳ ಪ್ರೀತಿ, ಮಾರ್ಗದರ್ಶನ ಮತ್ತು ಮಾಡೆಲಿಂಗ್‌ಗಾಗಿ ತಮ್ಮ ಪಿತೃಗಳ ಬೆಂಬಲವನ್ನು ಎದುರುನೋಡುತ್ತಾರೆ. ಜ್ಞಾನೋಕ್ತಿಗಳು ಆ ಪಿತೃಗಳ ಆ ಕುಟುಂಬದ ಸಂಪನ್ಮೂಲಗಳ ವಿಶ್ವಾಸಾರ್ಹ ಪೂರೈಕೆದಾರರು ಮತ್ತು ಬುದ್ಧಿವಂತ ವ್ಯವಸ್ಥಾಪಕರು ಎಂದು ಶ್ಲಾಘಿಸುತ್ತದೆ. ಅನೇಕ ಮಾರ್ಗಗಳು ಅದರಲ್ಲಿ "ಸೂರೆ ಮಾಡುವವನು ಸ್ವಂತ ಮನೆಯನ್ನು ಬಾಧಿಸುವನು" (ಜ್ಞಾನೋಕ್ತಿಗಳು 15:27); ಕೆಲಸದ ಮೇಲೆ ಕುಟುಂಬಕ್ಕೆ ಆದ್ಯತೆಯನ್ನು ನೀಡಲು ಪಿತೃಗಳು ಎಚ್ಚರವಾಗಿರಬೇಕು. ಧಾರ್ಮಿಕ ಪಿತೃಗಳು ತಾಳ್ಮೆಯಿಂದಿರಲು ಪ್ರಯತ್ನಿಸುತ್ತಾರೆ ಮತ್ತು ಅವರ ಭಾವನೆಗಳ ಅಧೀನತೆಯಲ್ಲಿ ಅವರ ಮಕ್ಕಳು ತಮ್ಮ ಮೇಲೆ ಅವಲಂಬಿತರಾಗಿರುವುದನ್ನು ಗೌರವಿಸುತ್ತಾರೆ. ಅವರು ತಮ್ಮ ಮಕ್ಕಳನ್ನು ಶಿಸ್ತು ಮಾಡುತ್ತಾರೆ. ಆದರೆ ತಮ್ಮ ಅಧಿಕಾರವನ್ನು ದುರ್ಬಳಕೆ ಮಾಡದಂತೆ ಎಚ್ಚರಿಕೆ ವಹಿಸುತ್ತಾರೆ. ಅತ್ಯಂತ ಮುಖ್ಯವಾದದ್ದು, ಸಮರ್ಪಿತವಾದ ಪಿತೃಗಳು ದೇವರನ್ನು ಹಿಂಬಾಲಿಸಲು ಬಯಸುತ್ತಾರೆ. ಆತನ ಪ್ರೀತಿಯ ಹತೋಟಿಯಿಂದ ಮತ್ತು ಆತನ ವಾಕ್ಯದ ಬೋಧನೆಯಿಂದ ಅವರ ಮಕ್ಕಳ ಪಾದಗಳನ್ನು ಸರಿಯಾದ ದಾರಿಯಲ್ಲಿ ನಡೆಯಲು ಮಾರ್ಗದರ್ಶನ ನೀಡಬಹುದು.

ಕೊನೆಯಲ್ಲಿ ತಂದೆ ತನ್ನ ಮಕ್ಕಳಿಗೆ ಮಾಡುವ ಮುಖ್ಯ ವಿಷಯವೆಂದರೆ ಅವರ ತಾಯಿಯನ್ನು ಪ್ರೀತಿಸುವುದು. ಅವಳಿಗೆ ತನ್ನ ನಂಬಿಕೆ ಮತ್ತು ನಿರಂತರ ಪ್ರೀತಿ ಅಥವಾ ಇವುಗಳ ಕೊರತೆಯು ಮಕ್ಕಳ ಯೋಗಕ್ಷೇಮದಲ್ಲಿಯೂ ಮತ್ತು ಪ್ರೌಢಾವಸ್ಥೆಯಲ್ಲಿಯೂ ಸಹ ಪರಿಣಾಮ ಬೀರುತ್ತದೆ.

ಜ್ಞಾನೋಕ್ತಿಗಳಲ್ಲಿ ದೇವರಿಗೆ ನಿಷ್ಠೆ, ಮದುವೆ ಮತ್ತು ಕುಟುಂಬಕ್ಕೆ ವಚನ ಬದ್ಧತೆ ಮತ್ತು ಒಬ್ಬರ ವೈಯಕ್ತಿಕ ಪ್ರಾಮಾಣಿಕತೆಯಲ್ಲಿ ಮತ್ತು ಸಮುದಾಯ ಜೀವನದ ಎಲ್ಲದರಲ್ಲಿನ ಯಶಸ್ಸಿನ ಸಂಕೇತದ ವಿಷಯವು ವ್ಯಕ್ತಿಯ ಹೃದಯದ ಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಪಾಪದ ಆಕರ್ಷಣೆಗಳು ಲೈಂಗಿಕತೆ, ಸೋಮಾರಿತನ, ಸಂಪತ್ತು ಅಥವಾ ಶಕ್ತಿಗಳಿಂದ ತುಂಬಿದೆ. ಆದರೆ ಬುದ್ಧಿವಂತ ಪತಿ ಮತ್ತು ತಂದೆ ಯಾವಾಗಲೂ ಸರಿಯಾದ ಆಯ್ಕೆಗಳನ್ನು ಮಾಡಲು ನಿರಂತರವಾಗಿ ದೇವರ ಸಹಾಯವನ್ನು ಎದುರು ನೋಡುತ್ತಾರೆ.

**ತಂದೆಗಾಗಿಯಾಗಲಿ ಅಥವಾ ಯಾರೊಬ್ಬರಿಗಾಗಿಯಾಗಲಿ ಈ ನೈತಿಕ ತತ್ವಗಳು ಇಲ್ಲಿ ಹೇಗೆ ಪ್ರಮುಖವಾಗಿದೆ? ನಿಮ್ಮ ಕ್ರಿಯೆಗಳು, ಒಳ್ಳೆಯದು ಅಥವಾ ಕೆಟ್ಟದ್ದಕ್ಕಾಗಲಿ, ಇತರರನ್ನು ವಿಶೇಷವಾಗಿ ಮಕ್ಕಳ ಮೇಲೆ ಹೇಗೆ ಪ್ರಭಾವ ಬೀರುತ್ತದೆ? ಯಾವ ರೀತಿಗಳಲ್ಲಿ ನೀವು ಹೆಚ್ಚು ಜಾಗರೂಕರಾಗಿರಬೇಕು?**

**ಮಂಗಳವಾರ** **ಏಪ್ರಿಲ್ 30**

## ಪ್ರೀತಿಯೊಂದಿಗೆ ತಿದ್ದುಪಡಿ

ಶಿಶುವಿನ ಶಿಸ್ತಿನು ಮತ್ತು ತಿದ್ದುಪಡಿಯ ಪ್ರಾಮುಖ್ಯತೆಯ ಬಗ್ಗೆ ಜ್ಞಾನೋಕ್ತಿಗಳು ಯಾವ ಬೋಧನೆ ನೀಡುತ್ತದೆ? ಜ್ಞಾನೋಕ್ತಿಗಳು 10:17, 23:13, 29:1, 29:15.

ಪೋಷಕರು ಕೆಲವೊಮ್ಮೆ ತಮ್ಮ ಮಕ್ಕಳಿಗೆ ಸ್ವೀಕಾರಾರ್ಹವಲ್ಲದ ಸಾಮಾಜಿಕ ನಡವಳಿಕೆ ಮೇಲೆ ಪ್ರಭಾವ ಬೀರಲು ಶಿಸ್ತು ಮಾಡುತ್ತಾರೆ. ಅವರ ಅವಿಧೇಯತ್ವಕ್ಕಾಗಿ ಶಿಕ್ಷಿಸುತ್ತಾರೆ ಅಥವಾ ಅಸಮಾಧಾನವಾದಾಗ ಅವರ ತೃಪ್ತಿಯನ್ನು ವ್ಯಕ್ತಪಡಿಸಲು ಸಹ ಆದರೆ ಆತನ ಕುಟುಂಬದ ಯುವ ಸದಸ್ಯರ ಶಿಸ್ತಿನ ಬಗ್ಗೆ ದೇವರ ಉದ್ದೇಶವೇನು? ಭವಿಷ್ಯದ ಭರವಸೆಗಾಗಿ ಜ್ಞಾನೋಕ್ತಿಗಳು ಶಿಕ್ಷೆಯನ್ನು ಈ ಸನ್ನಿವೇಶದಲ್ಲಿ ಇಡುತ್ತದೆ (ಜ್ಞಾನೋಕ್ತಿಗಳು 19:18) ಮಕ್ಕಳು ಪಾಪಸ್ವಭಾವದಲ್ಲಿ

ಇದ್ದಾರೆಂದು ದೈವಶಕ್ತಿಯುಳ್ಳ ಪೋಷಕರು ತಿಳಿದಿದ್ದಾರೆ. ಕೇವಲ ಒಂದು ಶಕ್ತಿ ಮಾತ್ರ ಅವರಿಗೆ ಸಹಾಯ ಮಾಡಬಹುದು ಮತ್ತು ಆ ಶಕ್ತಿ ಕ್ರಿಸ್ತನೇ (ಎಲೆನ್ ಜಿ ವೈಟ್, ಎಜ್ಯುಕೇಶನ್ ಪುಟ 29ನ್ನು ನೋಡಿರಿ). ಮಕ್ಕಳನ್ನು ದೇವರ ಕಡೆಗೆ ನಡೆಸಲು, ಕ್ರೈಸ್ತರ ಪಾಲನೆಯ ಸೇವೆಯಲ್ಲಿ ಶಿಸ್ತು ಒಳಗೊಂಡಿರುವುದು.

ಮೃದುವಾದ ಗಿಡವನ್ನು ಬೆಂಬಲಿಸುವುದು ಕ್ರಿಸ್ತನ ಮೂಲಕವಾಗಿ ಆಗುವ ಶಿಸ್ತು ಅಥವಾ ಅಧಿಕಾರದ ಪ್ರಯೋಗವು ಶಿಕ್ಷೆಯಾಗಿ ಕಾಣುವುದಿಲ್ಲ. ಆದರೆ ವಿಮೋಚನೆಯ ತಿದ್ದುಪಡಿಯಂತೆ ಕಾಣುತ್ತದೆ. ಪ್ರೀತಿಯ ಪೋಷಕರು ಪಾಪದ ಬಲವನ್ನು ತಿಳಿದುಕೊಂಡು ಅವರ ಮಕ್ಕಳಿಗೆ ಕ್ರಿಸ್ತನ ಹೆಜ್ಜೆ ಜಾಡಿನ ಮಾರ್ಗದರ್ಶನ ಮಾಡುವುದು ದೇವರ ಯೋಜನೆಯಾಗಿದೆ. ಕಾಳಜಿಯುಳ್ಳ ಪೋಷಕರು ದೃಢವಾಗಿ ಮತ್ತು ಕರುಣೆಯುಳ್ಳವರಾಗಿ ತಿದ್ದಿ, ಹೊಸದಾಗಿ ನೆಟ್ಟ ಮರಕ್ಕೆ ತೋಟಗಾರಿಕೋದ್ಯಮಿಗಳು ಬೆಂಬಲವನ್ನು ಒದಗಿಸುವಂತೆ ಆರಂಭಿಕ ವರ್ಷಗಳಿಂದಲೇ ಮಕ್ಕಳನ್ನು ಹತೋಟಿಯಲ್ಲಿಡುವುದು ಮತ್ತು ಮಾರ್ಗದರ್ಶನ ಮಾಡಬೇಕಾಗಿದೆ. ಸ್ವಯಂ ನಿಯಂತ್ರಣ ಹೊರಹೊಮ್ಮುವವರೆಗೂ ಮತ್ತು ಯುವಕರು ದೇವರಲ್ಲಿ ಭರವಸೆಗೆ ಬರುವುದಕ್ಕಾಗಿ ಮತ್ತು ರಕ್ಷಣೆ, ಬೆಳವಣಿಗೆ ಮತ್ತು ಪರಿಪಕ್ವತೆಗಾಗಿ ದೈವೀಕ ಯೋಜನೆಯೊಂದಿಗೆ ಸಹಕರಿಸುತ್ತಾರೆ.

**ಜ್ಞಾನೋಕ್ತಿಗಳು 13:24; 23:13, 14 ರಲ್ಲಿ ಪೋಷಕರಿಗೆ ಯಾವ ಸಂದೇಶವು ಕಂಡುಬರುತ್ತದೆ?**

ಎಲ್ಲರು ಹೇಳಿದರು ಕೆಲವೊಂದು ವಾಕ್ಯಗಳು ಮಾತ್ರ ಮಕ್ಕಳನ್ನು ಶಿಕ್ಷಿಸುವ ವಿಷಯದಲ್ಲಿ "ಕೋಲು" (ಇಬ್ರಿಯ ಭಾಷೆಯಲ್ಲಿ ಶೆಬೆಟ್) ಎಂದು ಉಲ್ಲೇಖಿಸುತ್ತವೆ. ಪಾಲನೆಯ ಲೇಖನದೊಳಗೆ ಜನಪ್ರಿಯವಾದ ಪೋಷಕರು ಬಳಕೆ ಮಾಡುವ ಕೋಲು ಪರಲೋಕದ ಕುರುಬನು ತನ್ನ ಮಂದೆಯನ್ನು ಮಾರ್ಗದರ್ಶನ ಮಾಡಲು ಬಳಕೆ ಮಾಡುವ ಉದ್ದೇಶದ ರೀತಿಯಲ್ಲಿರಬೇಕು (ಕೀರ್ತನೆಗಳು 23:4). ಬೇರೆಡೆ ತಾಳ್ಮೆಯ ಬೋಧನೆ ಸಮಂಜಸವಾದ ಮಾದರಿ, ಉತ್ತಮ ಸಂಪರ್ಕ ಮತ್ತು ಮಕ್ಕಳಲ್ಲಿ ಬದಲಾವಣೆಯನ್ನು ಪ್ರಭಾವಿಸುವುದಕ್ಕಾಗಿ ನಿಕಟ ಸಂಬಂಧಗಳನ್ನು ಧರ್ಮಶಾಸ್ತ್ರವು ಸೂಚಿಸುತ್ತದೆ (ಧರ್ಮೋಪದೇಶಕಾಂಡ 11:18,

19). ಶಿಸ್ತು ಅದರ ಸರಿಪಡಿಸುವ ಮತ್ತು ಬಿಡುಗಡೆ ಮಾಡುವ ಅಪೇಕ್ಷಿತ ಪರಿಣಾಮವನ್ನು ಹೊಂದಿದ್ದಲ್ಲಿ ಆತನ ಅಥವಾ ಆಕೆಯ ಹೆತ್ತವರಿಂದ ಪ್ರೀತಿಸಲ್ಪಟ್ಟ ಮಗುವಿನ ಭಾವನೆಯು ಮಹತ್ವವಾದುದು (ಜ್ಞಾನೋಕ್ತಿಗಳು 13:24).

**ತುಂಬಾ ನಿಷ್ಟುರವಾಗಿ ಮತ್ತು ತಪ್ಪಾಗಿ ಅರ್ಥೈಸಿಕೊಂಡಾಗ ಶಿಸ್ತು ಉದ್ದೇಶಿತ ಗುರಿಯಿಂದ ತಪ್ಪಿಹೋಯಿತು. ಪೋಷಕರು ತಮ್ಮ ಮಕ್ಕಳೊಂದಿಗೆ ಹೇಗೆ ವಿಷಯಗಳನ್ನು ಸರಿಪಡಿಸಬಹುದು?**

**ಬುಧವಾರ** **ಮೇ 1**

## ಮೇಲ್ಬಾವಣಿಯ ಮೇಲೆ ಜೀವನವು ಉತ್ತಮವಾಗಿದೆಯೇ?

ಸಂಸಾರದ ಜೀವನದಲ್ಲಿ ಕೆಲವು ಸಿಟ್ಟಾಗುವಿಕೆಯ ಮೇಲೆ ಜ್ಞಾನೋಕ್ತಿ ಪುಸ್ತಕವು ಯಾವ ರೀತಿಯಲ್ಲಿ ಹಾಸ್ಯವನ್ನು ಸಿಂಪಡಿಸುತ್ತದೆ? ಜ್ಞಾನೋಕ್ತಿಗಳು 21:9,19; 27:15,16. ಈ ಹಾಸ್ಯ ಯಾವ ಪರಿಣಾಮ ಹೊಂದಿದೆ?

ನಿಕಟ ಸಂಬಂಧಗಳಲ್ಲಿ ನಾವು ಒಬ್ಬರಿಗೊಬ್ಬರು ಆಧರಿಸುವ ವಿಧಾನಗಳನ್ನು ಕೆಲವು ಜ್ಞಾನೋಕ್ತಿಗಳು ಪರಿಗಣಿಸುತ್ತವೆ. ಹಗುರ ಸ್ಪರ್ಶ ಮತ್ತು ಬೆಳಗುವ ತಿಳುವಳಿಕೆಯೊಂದಿಗೆ ಅವರು ತಮ್ಮ ಪ್ರಧಾನ ವಿಷಯವನ್ನು ಮಾಡುತ್ತಾರೆ. ಗ್ರಹಿಸಿದ ಸ್ನೇಹಿತನ ಬಗ್ಗೆ "ಭಾರವಾದ ಹೃದಯಕ್ಕೆ ಸಂಗೀತ ಹಾಡುವುದು (ಜ್ಞಾನೋಕ್ತಿಗಳು 25:20) ಮತ್ತು ಮುಂಜಾನೆ ಏಳುವ ಕುಟುಂಬ ಸದಸ್ಯರು ಮಲಗಿರುವವರನ್ನು "ದೊಡ್ಡ ಧ್ವನಿಯೊಂದಿಗೆ" "ಆಶೀರ್ವದಿಸುವನು" (ಜ್ಞಾನೋಕ್ತಿಗಳು 27:14). ವಾದಗ್ರಸ್ತ ಮಹಿಳೆಯರ ಬಗ್ಗೆ ಈ ವಾಕ್ಯಗಳನ್ನು ಓದುವ ಹೆಂಡತಿಯರು ಪುರುಷರ ಬಗ್ಗೆ ಕೆಲವು "ಜ್ಞಾನೋಕ್ತಿಗಳನ್ನು" ಸೇರಿಸಲು ಬಯಸಬಹುದು! ಅವರು ಕೇವಲ ಸ್ತ್ರೀಯರನ್ನು ಗುರಿಯಾಗಿಸಿಕೊಂಡು ಈ ಜ್ಞಾನೋಕ್ತಿಗಳ ಸಮಸ್ಯೆಯನ್ನು ಶಾಶ್ವತಗೊಳಿಸುವಂತಹ ಹೇಳಿಕೆಗಳಿಗೆ ಎದುರುತ್ತರಿಸಬಹುದು. ಮನೆಯ ವಾತಾವರಣದ ಜವಾಬ್ದಾರಿಯನ್ನು ಹಂಚಿಕೊಳ್ಳುವಾಗ ಗಂಡಂದಿರು ವಾದಗ್ರಸ್ತ ನಡವಳಿಕೆಯನ್ನು ಸಮವಾಗಿ ಹೊಂದುವುದಕ್ಕೆ ಶಕ್ತರಾಗಿದ್ದಾರೆ (ಅನ್ನನೂ ಅಥವಾ ಕಾಯಫನ ಮನೆಯಲ್ಲಿ ಜೀವಿಸುವುದು ಯಾವ ರೀತಿ ಇರುತ್ತದೆಂದು ಊಹಿಸಿರಿ!)

ಹರ್ಷ ಹೃದಯ ಸಹಾಯ ಮಾಡುತ್ತದೆ. ಕುಟುಂಬ ಜೀವನದಲ್ಲಿ ಹಾಸ್ಯದ ಭಾವನೆಯು ಒಳ್ಳೆಯದು. ಹಾಸ್ಯವು ಜೀವನೋಪಾಯದ ಯಂತ್ರಗಳನ್ನು ನಯಗೊಳಿಸುತ್ತದೆ. ಒತ್ತಡ ಮತ್ತು ದಣಿವುಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. "ಹರ್ಷ ಹೃದಯವು ಒಳ್ಳೇ ಔಷಧ, ಕುಗ್ಗಿದ ಮನದಿಂದ ಒಣಮೈ" (ಜ್ಞಾನೋಕ್ತಿ 17:22) ಜ್ಞಾನೋಕ್ತಿ ಪುಸ್ತಕದ ಉದ್ದಕ್ಕೂ ತನ್ನದೇ ಸ್ವತಃ ಔಷಧಿಯನ್ನು ತೆಗೆದುಕೊಳ್ಳುತ್ತದೆ ಮತ್ತು ಸಿಟ್ಟು ಬರಿಸುವ ಮತ್ತು ಕಿರಿಕಿರಿಯುಂಟು ಮಾಡುವ ನಡವಳಿಕೆಗಳಲ್ಲಿ ಸಂತೋಷದ ನಗೆ ಬೀರುವುದಕ್ಕೆ ನಮಗೆ ಅನುಮತಿಸುತ್ತದೆ. ಬಹುಶಃ ನಾವು ಮುಗುಳು ನಕ್ಕಾಗ (ಅಥವಾ ಹಾಸ್ಯ ನಮ್ಮ ಮೇಲೆ ಇದ್ದಾಗ ಸ್ವಲ್ಪ ನೋವಾಗುತ್ತದೆ). ನಮ್ಮ ಹವ್ಯಾಸಗಳು ಅಥವಾ ಆ ಸ್ವಭಾವಗಳು ಕೋಪ ಬರಿಸುವ ಅಥವಾ ಕಿರಿಕಿರಿಯುಂಟು ಮಾಡುವುದರ ಬಗ್ಗೆ ಮಾತನಾಡುವ ಉತ್ತಮ ಸ್ಥಿತಿಯಲ್ಲಿದ್ದೇವೆ. ಮತ್ತೊಂದೆಡೆ, ಗಂಭೀರ ಗಮನ ಅಗತ್ಯವಿರುವ ಆ ಸಮಸ್ಯೆಗಳನ್ನು ಕಡಿಮೆ ಮಾಡುವುದಕ್ಕೆ ಅಥವಾ ತಪ್ಪಿಸುವುದಕ್ಕೆ ಹಾಸ್ಯವನ್ನು ಬಳಸಬಾರದು.

ಕಡಿಮೆ ದರ್ಜೆಯ ಜ್ವರವು ದೀರ್ಘಕಾಲದ ಸೋಂಕಿನ ರೋಗದ ಲಕ್ಷಣವಾಗಿದೆ. ಜಗಳವಾಡುವಿಕೆ, ಒತ್ತಾಯ ಮತ್ತು ಹೆಚ್ಚು ದೂರುಗಳು ಒಂದು ಅಥವಾ ಹೆಚ್ಚು ಕುಟುಂಬದ ಸದಸ್ಯರಲ್ಲಿ ಕೋಪವನ್ನು ಅಡಗಿಸಿರುವುದನ್ನು ಸೂಚಿಸಬಹುದು. ಬಹುಶಃ ಸಂಬಂಧದಲ್ಲಿನ ಪರಸ್ಪರತೆ ಅಥವಾ ಸಂಪರ್ಕದೊಂದಿಗಿನ ತೊಂದರೆಗಳಿಗೆ ಸಂಬಂಧಿಸಿರುತ್ತದೆ. ದೂರು ಹೇಳುವ ಸಂಗಾತಿಯು ಅವಲೋಕಿಸುವ ಶಕ್ತಿ, ನಿಯಂತ್ರಣ ಮತ್ತು ಮತ್ತೊಂದು ಸಂಪರ್ಕಕ್ಕೆ ಇಷ್ಟವಿಲ್ಲದನ್ನು ಸರಿಯಾಗಿಸಲು ಪ್ರಯತ್ನಿಸುತ್ತಾಳೆ. ಸೋಂಕು ತೆರವುಗೊಂಡರೆ ರೋಗಲಕ್ಷಣಗಳು ದೂರ ಹೋಗುತ್ತವೆ. ಕುಟುಂಬದಲ್ಲಿ ಸಮಸ್ಯೆಯನ್ನು ತಡೆಯುವುದಕ್ಕಿಂತ ಅಥವಾ ಸದಸ್ಯರು ಕರ್ತನಿಗೋಸ್ಕರ ತಮ್ಮ ಪ್ರೀತಿಯನ್ನು ಒಬ್ಬರಿಗೊಬ್ಬರು ಬೆಳೆಸಿಕೊಂಡು ಮತ್ತು ಪರಸ್ಪರ ತಮ್ಮ ಬದ್ಧತೆಯೊಂದಿಗೆ ಅವರ ಅಗತ್ಯತೆಗಳನ್ನು ಮತ್ತು ಭಾವನೆಗಳನ್ನು ಸಂಪರ್ಕಿಸುವ ಮೂಲಕ ತಮ್ಮ ಕೋಪದ ಮೂಲವನ್ನು ಪಡೆದುಕೊಂಡು, ಅದನ್ನು ತೆರವುಗೊಳಿಸುವುದು.

ಮನೆಗೆ ನಗುವು ಎಷ್ಟು ಮಹತ್ವದ್ದಾಗಿದೆ? ಒಳ್ಳೆಯದಕ್ಕಾಗಿ ಅದನ್ನು ಹೇಗೆ ಬಳಸಿಕೊಳ್ಳಬಹುದು ಅಥವಾ ಅದನ್ನು ಹೇಗೆ ದುರುಪಯೋಗಪಡಿಸಿಕೊಂಡು ಕೆಟ್ಟದ್ದಕ್ಕಾಗಿ ಬಳಸಿಕೊಳ್ಳಬಹುದು? ತರಗತಿಗೆ ನಿಮ್ಮ ಉತ್ತರವನ್ನು ತರುವುದು.

**ಗುರುವಾರ** **ಮೇ 2**

## ನಿಜವಾದ ಶ್ರೀಮಂತ ಪತ್ನಿ

ಜ್ಞಾನೋಕ್ತಿ ಪುಸ್ತಕವು ಗುಣವತಿಯಾದ ಸತಿಯು ಗುಣಗಳನ್ನು ಹೊಗಳುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ಹೊಗಳಿಕೆ ಪಡೆದ ಗುಣಲಕ್ಷಣಗಳನ್ನು ಮತ್ತು ಗುಣಮಟ್ಟವನ್ನು ಗುರುತಿಸಿ (ಜ್ಞಾನೋಕ್ತಿಗಳು 31:10–31).

ವರ್ಣಿಸಲ್ಪಟ್ಟ ಸ್ತ್ರೀ ವಿಶೇಷವಾದವಳು ಮತ್ತು ಅದರಂತೆಯೇ ಕವಿತೆ. ಪ್ರತಿಯೊಂದು ವಾಕ್ಯಗಳು ಜ್ಞಾನೋಕ್ತಿಗಳು 31:10 ರಿಂದ ಪ್ರಾರಂಭವಾಗುವುದು. ಇಬ್ರಿಯ ವರ್ಣಮಾಲೆಯ 22 ಅಕ್ಷರಗಳೊಂದರಲ್ಲಿ ಆರಂಭವಾಗುತ್ತದೆ. ಈ ಗೌರವಾರ್ಪಣೆಯಿಂದ ಒಬ್ಬ ಯೋಗ್ಯ ಹೆಂಡತಿಗೆ ಒಂದು ಅರ್ಥವಾಗುತ್ತದೆ. ಇಡೀ ರಾಷ್ಟ್ರೀಯ ವರ್ಣಮಾಲೆಯೂ ಸಹ ಅವಳನ್ನು ಸರಿಯಾಗಿ ಹೊಗಳುವುದಕ್ಕೆ ಪದಗಳನ್ನು ಕೂಡಿಸುವ ಕಿಂಚಿತ್ತು ಕೆಲಸವನ್ನು ಒದಗಿಸುತ್ತದೆ!

ಉತ್ತಮ ಸಂಗಾತಿಯನ್ನು ವಿವಾಹವಾಗುವುದಕ್ಕೆ ಸಂಬಂಧಿಸಿದಂತೆ ಜ್ಞಾನೋಕ್ತಿಗಳು ರಬ್ಬಿಯರ ವಿಚಾರದಲ್ಲಿ ಒತ್ತು ನೀಡುವುದನು ಪ್ರತಿಫಲಿಸುತ್ತದೆ. "ಒಬ್ಬ ಪುರುಷನ ಮನೆ ಆತನ ಹೆಂಡತಿಯೇ". ಗುಣವಂತೆಯು ಪತಿಯ ತಲೆಗೆ ಕಿರೀಟ; ಮಾನ ಕಳೆಯುವವಳು ಪತಿಯ ಎಲುಬಿಗೆ ಕ್ಷಯ" (ಜ್ಞಾನೋಕ್ತಿಗಳು 12:14) ಜ್ಞಾನೋಕ್ತಿಗಳ ಕೊನೆಯಲ್ಲಿ ಒಂದು ಭಾವಚಿತ್ರಕ್ಕೆ ಆದರ್ಶ ಗುಣಗಳು ಸುತ್ತಿಕೊಂಡಿದೆ. ಅನೇಕ ವಿಭಿನ್ನ ಕೌಶಲ್ಯಗಳೆಂದರೆ; ಬಟ್ಟೆ ತಯಾರಿಕೆ, ರಿಯಲ್ ಎಸ್ಟೇಟ್ ಖರೀದಿ, ಕೃಷಿ, ಮನೆ ಮತ್ತು ಆರ್ಥಿಕ ನಿರ್ವಹಣೆ. ಅಷ್ಟರಲ್ಲಿ ಆಕೆಯು ತನ್ನ ಕುಟುಂಬಕ್ಕೆ ಚೆನ್ನಾಗಿ ಕಾಳಜಿ ವಹಿಸುತ್ತಾಳೆ. ಅವರು ಅವಳನ್ನು ಪ್ರೀತಿಸುತ್ತಾರೆ ಮತ್ತು ಅವಳನ್ನು ಹೊಗಳುತ್ತಾರೆ. ಈ ವ್ಯಾಪಕ ಪ್ರತಿಭೆಯನ್ನು ಪ್ರತಿಯೊಬ್ಬ ಮಹಿಳೆಯಲ್ಲಿ ನಿರೀಕ್ಷಿಸಲಾಗುವುದಿಲ್ಲ ಅಥವಾ ಗಂಡಂದಿರು ಅವರ

ಹೆಂಡತಿಯರನ್ನು ಅಳೆಯುವಂತಹ ಯಾವುದಾದರೂ ನೀಲಿ ನಕ್ಷೆಯಿದೆಯೇ. ಬದಲಿಗೆ ಈ ಸಾಮರ್ಥ್ಯಗಳು ಮತ್ತು ಗುಣಧರ್ಮಗಳನ್ನು ವರ್ಣಿಸುವ ಮೂಲಕ ಜ್ಞಾನೋಕ್ತಿಗಳು ಯಾವುದು ಮುಖ್ಯ ಮತ್ತು ಸಾರ್ವತ್ರಿಕವಾಗಿ ಮಹಿಳೆಯರಿಗೆ ಸಮಂಜಸವಾಗಿದೆ, ಅಲ್ಲದೆ ಪುರುಷರಿಗಾಗಿ : ವಿಶ್ವಾಸಾರ್ಹತೆಯ ಗುಣಲಕ್ಷಣಗಳು, ಕರುಣೆ, ವಿಶ್ವಾಸಾರ್ಹತೆ, ನಂಬಿಗಸ್ತಿಕೆ, ದಯೆ ಮತ್ತು ಪರಿಶ್ರಮ. ಜ್ಞಾನೋಕ್ತಿಗಳು 31:30ರ ಪ್ರಕಾರ ಅಂತಹ ಜೀವನದ ರಹಸ್ಯ, ಅವರು "ಕರ್ತನಿಗೆ ಭಯಪಡುತ್ತಾಳೆ".

ಜ್ಞಾನೋಕ್ತಿಗಳು 31:10ರಲ್ಲಿ "ಸದ್ಗುಣ" ಅಥವಾ "ಗುಣವಂತೆ" ಎಂಬ ಪದದ ಅರ್ಥವೇನೆಂದರೆ "ಶಕ್ತಿ" "ಸಾಮರ್ಥ್ಯ" ಅಥವಾ "ಐಶ್ವರ್ಯ" ಕೀರ್ತನೆಗಳು 62:10ರಲ್ಲಿ ಇದನ್ನು "ಸಂಪತ್ತು" ಎಂದು ಅನುವಾದಿಸಲಾಗಿದೆ ಮತ್ತು ಯೆಹೋಶುವನನ್ನು "ಶೌರ್ಯ ಪುರುಷ"ನೆಂದು ವರ್ಣಿಸಲಾಗಿದೆ (ಯೆಹೋಶುವ 1:14ರಲ್ಲಿ ಮಹತ್ವ ನೀಡಲಾಗಿದೆ). ಭೋವಜನು ರೂತಳಿಗೆ "ಗುಣವಂತೆ" ಎಂಬ ಪದದೊಂದಿಗೆ ಪ್ರಶಂಸಿಸುತ್ತಾನೆ (ರೂತಳು 3:11). ಜ್ಞಾನೋಕ್ತಿಗಳಲ್ಲಿ 31:10 ರಲ್ಲಿ "ಸಂಪತ್ತು" ಎಂಬ ಪರಿಕಲ್ಪನೆಯ ಬಗ್ಗೆ ಒಂದು ನಾಟಕವಿದೆ. ನಿಜವಾದ ಸಂಪತ್ತು ಅಡಗಿರುವುದು ಗುಣ ಪ್ರಾಮಾಣಿಕತೆ ಮತ್ತು ಕರ್ತನ ಭಯದಲ್ಲಿದೆ. ಇದು ಅಮೂಲ್ಯ ರತ್ನಗಳಲ್ಲಿ ಕಂಡುಬರುವ ಮೌಲ್ಯವನ್ನು ಮೀರಿಸುತ್ತದೆ.

**ನಿಮ್ಮ ಜೀವನವನ್ನು ಪ್ರಭಾವಿಸಿದ ಶೌರ್ಯ ಮತ್ತು ಗುಣವಂತೆ ಮಹಿಳೆಯರು ಯಾರು? ಧಾರ್ಮಿಕ ಮಹಿಳೆಯರ ಗುಣಲಕ್ಷಣಗಳು, ಸದ್ಗುಣಗಳು ಮತ್ತೆ ಸಾಮರ್ಥ್ಯಗಳ ಪಟ್ಟಿಯನ್ನು ನೀವು ಹೇಗೆ ವಿಸ್ತರಿಸುತ್ತೀರಿ?**

**ಶುಕ್ರವಾರ** **ಮೇ 3**

**ಮುಂದಿನ ಆಲೋಚನೆ :** ಪರಲೋಕದಲ್ಲಿ ಹೃದಯವನ್ನು ಇಡುವುದು ಕ್ರೈಸ್ತರು ಎಲ್ಲಾ ದೃಢ ಪ್ರಯತ್ನದೊಂದಿಗೆ ಅವರ ಹೃದಯವನ್ನು ಕಾಪಾಡಿಕೊಳ್ಳಲು ಎಚ್ಚರಿಕೆಯಿಂದಿರಬೇಕು. ಅವರ ಧ್ಯಾನಕ್ಕಾಗಿ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು ಮತ್ತು ಭಕ್ತಿಯ ಮನಸ್ಸನ್ನು ಹೃದಯದಲ್ಲಿಟ್ಟುಕೊಳ್ಳಬೇಕು. ಧ್ಯಾನದಲ್ಲಿ ಕಳೆದ ಕ್ಷಣಗಳಿಗೆ ಹಲವು ಮಂದಿ ಅಸಮಾಧಾನ ಪಡಿಸುತ್ತಿದ್ದಾರೆಂದು ಭಾಸವಾಗುತ್ತಿದೆ ಮತ್ತು ಧರ್ಮಶಾಸ್ತ್ರವನ್ನು ಹುಡುಕುವುದು ಮತ್ತು ಪ್ರಾರ್ಥನೆ. ಹೀಗೆ

ಆವರಿಸಿಕೊಂಡ ಸಮಯ ಕಳೆದು ಹೋಯಿತು. ನೀವು ಎಲ್ಲಾ ವಿಷಯಗಳನ್ನು ದೇವರ ಬೆಳಕಿನಲ್ಲಿ ಕಾಣಬಹುದೆಂದು ನಾನು ಬಯಸುತ್ತೇನೆ; ಯಾಕೆಂದರೆ ನೀವು ಪರಲೋಕ ರಾಜ್ಯವನ್ನು ಮೊದಲು ಪ್ರಾಮುಖ್ಯತೆಯಾಗಿ ಮಾಡಿಕೊಂಡಿದ್ದೀರಿ, ನಿಮ್ಮ ಹೃದಯವನ್ನು ಪರಲೋಕದಲ್ಲಿ ಇಟ್ಟುಕೊಳ್ಳಲು ನಿಮ್ಮ ಎಲ್ಲಾ ಶೋಭೆಗಳಿಗೆ ಶಕ್ತಿಯನ್ನು ಕೊಟ್ಟು ಮತ್ತು ನಿಮ್ಮ ಕರ್ತವ್ಯಗಳಿಗೆ ಜೀವನವನ್ನು ಇಡುವಿರಿ. ಪರಲೋಕದ ವಿಷಯಗಳ ಮೇಲೆ ನೆಲೆಸಲು ಮನಸ್ಸನ್ನು ಶಿಸ್ತು ಮಾಡಿರಿ, ನಮ್ಮ ಎಲ್ಲಾ ಪ್ರಯತ್ನಗಳೊಳಗೆ ಜೀವನ ಮತ್ತು ಶ್ರದ್ಧೆಯನ್ನು ಇಡಿರಿ... ನಾವು ಆಧ್ಯಾತ್ಮಿಕ ಸಿದ್ಧಿಯಲ್ಲಿ ಪ್ರಾಬಲ್ಯರಾಗಿದ್ದೇವೆ... (ಎಫೆಸದವರಿಗೆ 4:13)" – ಎಲೆನ್ ಜಿ ವೈಟ್ ಕಾಮೆಂಟ್ಸ್, ದಿ ಎಸ್.ಡಿ.ಎ. ಬೈಬಲ್ ಕಾಮೆಂಟರಿ, ಸಂಪುಟ 3, ಪುಟ 1157.

## ಚರ್ಚಿಸಬೇಕಾದ ಪ್ರಶ್ನೆಗಳು

1. ಅನೇಕ ಕ್ರೈಸ್ತರು ಶೋಧನೆ ವಿರುದ್ಧವಾಗಿ "ತಮ್ಮ ಹೃದಯಗಳನ್ನು ಕಾಯಲು" ಸಹಾಯಕವಾಗುವಂತೆ ಬೆಂಬಲಿಸುವ ಒಂದು ಗುಂಪಿನ ಜಾಲವನ್ನು ಅವರು ಹುಡುಕುತ್ತಿರುವುದನ್ನು ಕಂಡುಕೊಳ್ಳುತ್ತಾರೆ. ಯಾವ ರೀತಿಯಲ್ಲಿ ಈ ಹೆಚ್ಚಾಗುವಿಕೆ ಪ್ರಾರ್ಥನೆ ಸತ್ಯವೇದದ ಅಧ್ಯಯನ, ಪವಿತ್ರಾತ್ಮನ ಮೇಲೆ ಅವಲಂಬನೆ ಇರಬಹುದು? ಕೆಲವು ಸಂದರ್ಭಗಳಲ್ಲಿ ಯಾರೊಬ್ಬರು ನಿಜವಾಗಿ ಶೋಧನೆಗಳೊಂದಿಗೆ ಹೋರಾಡುತ್ತಿದ್ದರೆ ಅದು ಅವರನ್ನು ಪಾಪಕ್ಕೆ ನಡೆಸುತ್ತಿದ್ದು ಮತ್ತು ಅವರು ನಿಲ್ಲಿಸಲು ಸಾಧ್ಯವಾಗುತ್ತಿಲ್ಲವೆಂದು ತೋರುವಾಗ ವೃತ್ತಿಪರ ಸಹಾಯವನ್ನು ಹುಡುಕುವುದು ಏಕೆ ಒಳ್ಳೆಯ ಆಲೋಚನೆಯಾಗಿದೆ?

2. ಒಂದು ತರಗತಿಯಂತೆ ಬುಧವಾರದ ಅಂತಿಮ ಪ್ರಶ್ನೆಗೆ ನಿಮ್ಮ ಉತ್ತರವನ್ನು ಗಟ್ಟಿಯಾಗಿ ಓದಿರಿ. ನಿಮ್ಮ ಹಲವಾರು ಉತ್ತರಗಳ ಪರಿಣಾಮಗಳನ್ನು ಚರ್ಚಿಸಿರಿ. ದೇವರು ನಮಗೆ ಕೊಟ್ಟಿರುವ ಅದ್ಭುತವಾದ ಅನೇಕ ಸಂಗತಿಗಳಂತೆ ನಗು ಮತ್ತು ಹಾಸ್ಯವನ್ನು ದುರುಪಯೋಗ ಮತ್ತು ತಿರುಚಿದ್ದಾದರೆ ಏನಾದರೊಂದು ಪ್ರತ್ಯಕ್ಷವಾಗಿ ಹಾನಿಕಾರವಾಗಬಹುದು ಹೇಗೆ?

3. ಜ್ಞಾನೋಕ್ತಿ 31ರಲ್ಲಿ ಪರಸ್ಪರ ವ್ಯತ್ಯಾಸ ತೋರಿಸುವ ಸಮಕಾಲೀನ ಸಂಸ್ಕೃತಿಯು ಮಹಿಳೆಯಲ್ಲಿರುವ ಯಾವ ಗುಣಲಕ್ಷಣಕ್ಕೆ ಹೊಗಳುತ್ತದೆ? ಅದೇ ರೀತಿಯ ಅವಮಾನಕರ ವರ್ತನೆಯಲ್ಲಿ ಪಾಲ್ಗೊಳ್ಳದಂತೆ ವ್ಯಕ್ತಿಗಳು ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದು?

4. ಸಾಮಾನ್ಯವಾಗಿ ನಿಮ್ಮ ಸಮಾಜದಲ್ಲಿ ಕುಟುಂಬ ಜೀವನದ ಬಗ್ಗೆ ಕೆಲವು ಸಾಂಸ್ಕೃತಿಕ ವರ್ತನೆಗಳು ಆ ಕುಟುಂಬದ ಜೀವನದ ಸತ್ಯವೇದ ತತ್ವಗಳೊಂದಿಗೆ ನೇರವಾಗಿ ಘರ್ಷಣೆಯನ್ನು ಮಾಡುವುದು ಯಾವುದು ಮತ್ತೊಂದೆಡೆ, ಸತ್ಯವೇದದ ತತ್ವಗಳಿಗೆ ಸಮಾನಾಂತರ ಹೊಂದಿರುವ ಕೆಲವು ಸಾಂಸ್ಕೃತಿಕ ವರ್ತನೆಗಳು ಇವೆಯೇ? ಹಾಗಿದ್ದಲ್ಲಿ ಅವು ಯಾವುವು ಮತ್ತು ನಮ್ಮ ಕುಟುಂಬಗಳನ್ನು ಬಲಪಡಿಸಲು ಅವುಗಳನ್ನು ಹೇಗೆ ಬಳಸಬಹುದು?